ದಿಃ 05-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರೀ. ಕೆ.ಬಿ.ಜಿ ವಕೀಲರಿಂದಃ**

ದಾವಾ ಆಸ್ತಿಯು ನನ್ನ ತಾತನ ಪಿತ್ರಾರ್ಜಿತ ಆಸ್ತಿ. ನನ್ನ ತಾತನ ಹೆಸರು ಹನುಮಂತರಾಯಪ್ಪ. ಸದರಿ ಹನುಮಂತರಾಯಪ್ಪನ ತಂದೆಯ ಹೆಸರು ನಂಜುಂಡಪ್ಪ. ನಂಜುಂಡಪ್ಪನ ತಂದೆಯ ಹೆಸರು ಗೊತ್ತಿಲ್ಲ. ಸ್ರ್ವೆ ನಂ.161 ರ ಒಟ್ಟು ವಿಸ್ತೀರ್ಣ 7 ಎಕರೆ 18 ಗುಂಟೆ ಇರುತ್ತದೆ. ಸಾಕ್ಷಿಯು ಮುಂದುವರೆದು ಸದರಿ ವಿಸ್ತೀರ್ಣ 3 ಭಾಗಗಳಾಗಿ ವಿಂಗಡನೆಯಾಗಿದೆ ಎಂದು ನುಡಿಯುತ್ತಾರೆ. ಸದರಿ 7 ಎಕರೆ 18 ಗುಂಟೆ ಜಮೀನಿಗೆ ಚೆಕ್ಕುಬಂದಿ ಗೊತ್ತಿಲ್ಲ. ದಾವೆ ಹೂಡುವ ಕಾಲಕ್ಕೆ ದಾವಾ ಆಸ್ತಿಯ ಮೂಲ ದಾಖಲೆಗಳನ್ನು ನೋಡಿದ್ದೇನೆ. ಸದರಿ 7 ಎಕರೆ 18 ಗುಂಟೆ ಜಮೀನನ್ನು ಲಿಂಗಪ್ಪ ರವರು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಲಿಂಗಪ್ಪ ರವರಿಗೆ ಪಾಪಣ್ಣ, ಮೈಲಾರ ಸ್ವಾಮಿ ಮತ್ತು ನಂಜುಂಡಪ್ಪ ಎಂಬ 3 ಮಕ್ಕಳು. ನನ್ನ ತಾತ ಹನುಮಂತರಾಯಪ್ಪ ಮತ್ತು ಅವರ ಸಹೋದರ ನಾರಾಯಣಪ್ಪರವರ ಹೆಸರಿನಲ್ಲಿ ಜಂಟಿಯಾಗಿ ಪಹಣಿಯಲ್ಲಿ ಕಲಂ ನಂ.9 ರಲ್ಲಿ ಸರ್ವೆ ನಂ.161 ರ ಆಸ್ತಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂ.161 ಒಟ್ಟು ಎಷ್ಟು ಪೋಡ್ ಆಗಿದೆ ಎಂದು ಗೊತ್ತಿಲ್ಲ.

ನನ್ನ ತಾಯಿ ಲಕ್ಷ್ಮಮ್ಮ ರವರು ಒಂದು ನಿವೇಶನವನ್ನು ಪ್ರತಿವಾದಿಗಳಿಗೆ ಕರಾರು ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದ ಮೂಲ ಪ್ರತಿ ನನ್ನ ಬಳಿ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೈಕಿ ಒಂದು ನಿವೇಶನಕ್ಕೆ ಸಂಬಂಧಿಸಿದಂತೆ ಕರಾರು ಪತ್ರದ ಪ್ರಕಾರ ಕ್ರಯ ಪತ್ರ ನೋಂದಣಿ ಮಾಡಿಕೊಡುವಂತೆ ಪ್ರತಿವಾದಿಗಳು ನಮಗೆ ಕೇಳಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯು ಗೌರಿಬಿದನೂರು ನಗರದ ಸಮೀಪ ಇದೆ ಎಂದರೆ ಸರಿ. ದಾವೆ ಹೂಡುವ ಕಾಲಕ್ಕೆ ಒಂದು ಎಕರೆ ಬೆಲೆ 15 ರಿಂದ 20 ಲಕ್ಷ ಇತ್ತು ಎಂದರೆ ಗೊತ್ತಿಲ್ಲ. ಪ್ರಸ್ತುತ ದಾವಾ ಆಸ್ತಿಯ ಬೆಲೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು